ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿನಗರ ವಲಯ
18ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು- 98

ಸಂಖ್ಯೆ.ಮು.ಅ/ರಾ.ರಾ.ನ.ವ/ಪಿಆರ್/ಕ್ರ.ಸಂ.1/ಕ/2021-22 ದಿನಾಂಕ:08.12.2021

ಪರಿವೀಕ್ಷಣಾ ವರದಿ

ವಿಷಯ:- **Comprehensive Development of Roads, Drains, Special repairs to buildings and other works in Sunnadagoodu, Ambedkarnagar, Mohan Kumar nagar, Poornapura, Ramabhovi Colony, Jalahalli Harijana, Siddarthanagar, Khathanagar, Ashrayanagar, Karadigudi, Peenya 4th block, AK Colony and Surrounding areas of slums in R.R Nagara Constituency under Package 2019-20 RRN-Div-(13)** ಕಾಮಗಾರಿಯ ಪರಿವೀಕ್ಷಣಾ ವರದಿ ನೀಡುವ ಬಗ್ಗೆ.

* * * * *

ಹಾಜರಿದ್ದ ಅಧಿಕಾರಿಗಳು

1. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಶವಂತಪುರ ಉಪವಿಭಾಗ
3. ಸಹಾಯಕ ಅಭಿಯಂತರರು, ವಾರ್ಡ್ ನಂ.17

ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ವಾರ್ಡ್ ನಂ.17, ಯಶವಂತಪುರ ಉಪವಿಭಾಗ ವಾರ್ಡ್ ವ್ಯಾಪ್ತಿಯಲ್ಲಿ 2019-20ನೇ ಸಾಲಿನ ಬಿಬಿಎಂಪಿ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3744 ಅನುದಾನದಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಯಾದ **"Comprehensive Development of Roads, Drains, Special repairs to buildings and other works in Sunnadagoodu, Ambedkarnagar, Mohan Kumar nagar, Poornapura, Ramabhovi Colony, Jalahalli Harijana, Siddarthanagar, Khathanagar, Ashrayanagar, Karadigudi, Peenya 4th block, AK Colony and Surrounding areas of slums in R.R Nagara Constituency under Package 2019-20 RRN-Div-(13)" (017-20-000009)** ಅಂದಾಜು ಪಟ್ಟಿ ಮೊತ್ತ ರೂ.1000.00 ಲಕ್ಷಗಳಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರದಂತೆ ಅಂದಾಜು ಪಟ್ಟಿ ಮಂಜೂರಾಗಿದ್ದು, ಅದರಂತೆ ಟೆಂಡರ್ ಆಹ್ವಾನಿಸಿ, ಸದರಿ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರಾದ ಶ್ರೀ.ಕೃಷ್ಣಮೂರ್ತಿ ಎನ್.ಎಂ ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಕಾಮಗಾರಿಯ ಮೂಲ ಅಂದಾಜುಪಟ್ಟಿಯಲ್ಲಿ ವಾರ್ಡ್ ನಂ.17ರ ವ್ಯಾಪ್ತಿಯ ಖಾತಾನಗರ ಮತ್ತು ಆಶ್ರಯನಗರದ ಪ್ರದೇಶಗಳಲ್ಲಿ ಬಿಟುಮಿನ್ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅಗತ್ಯವಿರುವ ಅಂಶಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ., ಆದರೆ ಕಾಮಗಾರಿಯನ್ನು ಪ್ರಾರಂಭಿಸಿದ ಸಮಯದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದ ರಸ್ತೆಗಳ ಅಕ್ಕಪಕ್ಕದಲ್ಲಿ ಕೆಲವು ಸಣ್ಣ ಸಣ್ಣ ಮಣ್ಣಿನ ರಸ್ತೆಗಳಿರುವುದು ಕಂಡು ಬಂದಿದ್ದು, ಹಾಲಿ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಜೊತೆಗೆ ಈ ಸಣ್ಣ ಸಣ್ಣ ಮಣ್ಣಿನ ರಸ್ತೆಗಳನ್ನು ಸಹ ಅಭಿವೃದ್ಧಿ ಪಡಿಸುವಂತೆ ಸ್ಥಳೀಯ ನಾಗರೀಕರು ಮನವಿ ಮಾಡಿರುತ್ತಾರೆ.

ಮು.ತಿ.ನೋ...

Scanned with CamScanner

ಮುಂದುವರೆದಂತೆ, ಸದರಿ ವಿಷಯವನ್ನು ಮುಖ್ಯ ಅಭಿಯಂತರರು(ರಾ.ರಾ.ನಗರ) ರವರ ಗಮನಕ್ಕೆ ತರಲಾಗಿ ಮು.ಅ(ರಾ.ರಾ.ನಗರ) ರವರು ಕಾ.ಪಾ.ಅ(ರಾ.ರಾ.ನಗರ) /ಸ.ಕಾ.ಅ(ಯಶವಂತಪುರ) /ಸ.ಅ (ವಾರ್ಡ್–17) ರವರೊಂದಿಗೆ ಕಾಮಗಾರಿ ಸ್ಥಳವನ್ನು ಪರಿಶೀಲಿಸಿ ಸಾರ್ವಜನಿಕರು ಅಭಿವೃದ್ಧಿಪಡಿಸಲು ಕೋರಿದ್ದ ರಸ್ತೆಗಳು ಸಂಪೂರ್ಣ ಮಣ್ಣಿನ ಸಣ್ಣ ರಸ್ತೆಗಳಾಗಿದ್ದು, ಸದರಿ ರಸ್ತೆಗಳಲ್ಲಿ ಸಿಮೆಂಟ್ ಕಾಂಕ್ರಿಂಟ್ ರಸ್ತೆ ನಿರ್ಮಾಣ ಮಾಡುವುದು ಸೂಕ್ತವಾಗಿದ್ದ ಕಾರಣ ಸಿಮೆಂಟ್ ಕಾಂಕ್ರಿಟ್ ನಿರ್ಮಾಣಕ್ಕೆ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ಅನುಮೋದಿತ ಅಂದಾಜು ಪಟ್ಟಿಯ ಮೊತ್ತದಲ್ಲಿ ನಿರ್ವಹಿಸಲು, ಸದರಿ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿರುವ ಅಂಶಗಳನ್ನು ಸ್ಥಳದಲ್ಲಿನ ಅವಶ್ಯಕತೆ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ಅನುಕೂಲವಾಗುವಂತೆ ಅವಶ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಕೆಲವು ಮಾರ್ಪಾಡುಗಳೊಂದಿಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ಅನುಮೋದಿತ ಟಿಂಡರ್ ಮೊತ್ತದೊಳಗೆ ತಯಾರಿಸಿ, ಅನುಮೋದನೆ ಪಡೆದುಕೊಳ್ಳಲು ಕಾರ್ಯಪಾಲಕ ಅಭಿಯಂತರರು (ರಾ.ರಾ.ನಗರ) ರವರಿಗೆ ಪರಿವೀಕ್ಷಣೆ ಸಮಯದಲ್ಲಿ ಸೂಚಿಸಲಾಯಿತು.

ಮುಖ್ಯ ಅಭಿಯಂತರರು
ರಾಜರಾಜೇಶ್ವರಿನಗರ ವಲಯ

ರವರಿಗೆ,
ಕಾರ್ಯಪಾಲಕ ಅಭಿಯಂತರರು
ರಾಜರಾಜೇಶ್ವರಿನಗರ ವಿಭಾಗ

Scanned with CamScanner